ನೋಡಿದಳು ಸಾವಿತ್ರಿ. ವಯಸ್ಸಿನಲ್ಲಿ ಚಿಕ್ಕವಳಾದರೂ ವಯಸ್ಸಾದವಳಂತೆ ಕಾಣುತ್ತಿದ್ದಾಳೆ. ಮುಖದಲ್ಲಿ ಪೌರುಷ, ಹಟವಿದೆ. ನೋಟದಲ್ಲಿ ರೋಷವಿದೆ.

ಆಕೆ ಅಳುತ್ತ, ''ಇಲ್ಲಿ ಕಾನೂನು ಹೇಗೆ ಇದೆಯೆಂದು ಗೊತ್ತಿಲ್ಲ. ನಿನ್ನೆಯವರೆಗೂ ಇಪ್ಪತ್ತೈದು ಲಕ್ಷ ಅಂತಲೇ ಇದ್ದರು. ಇವತ್ತು ಬರುವವೇಳೆಗೆ ಅರ್ಧ ಲಕ್ಷ ಹೆಚ್ಚಿಗೆ ಬೇಕಾಗುತ್ತದೆ ಎನ್ನುತ್ತಿದ್ದಾರೆ. ಈಗಿಂದೀಗಲೇ ಅಂದರೆ ಎಲ್ಲಿಂದ ತಂದು ಕೊಡುವುದು. ನಮ್ಮ ತಾತ, ತಂದೆ ಮದ್ರಾಸಿಗಳು. ಹೊಟ್ಟೆಪಾಡಿಗಾಗಿ ಚಹಾ ತೋಟಗಳಿಗೆ ಸಂಬಳದಾರರಾಗಿ ಸಿರಿಲಂಕಕ್ಕೆ ಹೋದರು. ಯಾವ ಗಳಿಗೆಯಲ್ಲಿ ಈ ಭೂಮಿಯ ಮೇಲೆ ಹುಟ್ಟಿದೆನೋ, ಜೀವನವೆಲ್ಲ ಕಷ್ಟಗಳೇ...'' ಎನ್ನುತ್ತ ನಿಲ್ಲಿಸಿ ಸಾವಿತ್ರಿಯನ್ನು ನೋಡಿದಳು.

ಸಾವಿತ್ರಿಗೆ ತಡೆಯಬೇಕೆಂದುಕೊಂಡರೂ ಆಗದೆ ದುಃಖ ಒತ್ತರಿಸಿಕೊಂಡು ಬರುತ್ತಿದೆ. ಆದರೂ ತಡೆದು ಆಕೆಯನ್ನೇ ನೋಡುತ್ತಿದ್ದಾಳೆ.

ಮತ್ತಷ್ಟು ಹತ್ತಿರ ಬಂದ ಆಕೆ ನೋವಿನಿಂದ, ''ನಾಲ್ಕು ತಲೆಮಾರುಗಳಿಂದ ದೇವನ ಗುಟ್ಟ ಗಡ್ಡೆಯ ಮೇಲೆ ಹಾವಾಡಿಗರಾಗಿ ಬದುಕು ಸವೆಸುತ್ತಿದ್ದರೂ ನಾವು ಅಲ್ಲಿ ಹೊರಗಿನವರೇ. ಆ ಹೋರಾಟ ಇನ್ನೂ ಸಾಗುತ್ತಲೇ ಇದೆ. ಹೋರಾಟದಲ್ಲಿ ತಲೆಮರೆಸಿಕೊಂಡಿರುವ ನನ್ನ ಗಂಡನ ತಲೆಗೆ ಸರ್ಕಾರ ಬೆಲೆ ಕಟ್ಟಿದೆಯಮ್ಮ...'' ಎನ್ನುತ್ತ ಮುಂದುವರಿಸಲಾರದೆ ತಡೆದಳು.

ಸಾವಿತ್ರಿಯ ಕಣ್ಣಿಂದ ಪಟಪಟನೆ ಕಣ್ಣೀರು ಸುರಿಯುತ್ತಿದೆ.

'ಇದೇನು... ಒಣಗಿಹೋಗಿದೆಯೆಂದುಕೊಂಡ ಕಣ್ಣೀರು ತುಂಬಿ ಬರುತ್ತಿದೆ. ಹೆಪ್ಪುಗಟ್ಟಿದೆ ಎಂದುಕೊಂಡ ಎದೆಯಲ್ಲಿ ಸಂಚಲನ. ನಿನ್ನೆಯಿಂದ ಕರಗದ ಹೃದಯ ಇವತ್ತು ಕರಗುತ್ತಿದೆಯೇಕೆ' ಎಂದುಕೊಂಡಳು ಸಾವಿತ್ರಿ.

ಕೋರ್ಟ್ ಹಾಲ್‌ನಿಂದ ಹೊರಗೆ ಬಂದಂತಿದ್ದಾನೆ ಚಂದ್ರು. ಕೋಪದಿಂದ ''ದೊಡ್ಡಮ್ಮಾ'' ಎಂದು ಅರಚಿದ. ಸಾವಿತ್ರಿ ಕೇಳಿಸದಂತೆಯೇ ಇದ್ದಾಳೆ.

ಶ್ರೀಲಂಕದ ಮಹಿಳೆ ಸಾವಿತ್ರಿಯ ಎರಡು ಕೈಗಳನ್ನು ಹಿಡಿದುಕೊಂಡು, ''ನನ್ನ ಗಂಡ ಹೇಗಿದ್ದರೂ ಜೀವಂತವಾಗಿ ಹೊರಬರಲಾರ. ಕನಿಷ್ಠ ಮಕ್ಕಳನ್ನಾದರೂ ಉಳಿಸಿಕೊಳ್ಳಬೇಕೆಂದು ಅಲ್ಲಿ ಜೀವನೋಪಾಯವಿಲ್ಲದೆ ಇಲ್ಲಿಗೆ ಕಳುಹಿಸಿದೆ. ಆದರೆ ವಿಧಿಬರಹ ಸರಿಯಿಲ್ಲ. ಹಸಿವು ತಡೆಯಲಾರದೆ ಒಂದು ರಾತ್ರಿ ಮುಸುಕಿನಲ್ಲಿ ಅಕ್ಕಿ ಗೋದಾಮಿಗೆ ನನ್ನ ಮಕ್ಕಳು ಕಳ್ಳತನಕ್ಕೆ ಹೋಗಿದ್ದರಂತೆ. ಸೆಕ್ಯುರಿಟಿ ಗಾರ್ಡ್ ಆಗಿ ನಿನ್ನ ಮಗ ಇದ್ದನಂತೆ. ಅವರ ನಡುವೆ ಹೊಡೆದಾಟವಾಯಿತಂತೆ. ಚೆನ್ನಾಗಿ ಅರ್ಥ ಮಾಡಿಕೋ. ಸಾಯಿಸಿದ್ದು ನನ್ನ ಮಕ್ಕಳಲ್ಲ. ಸತ್ತದ್ದು ನಿನ್ನ ಮಗನಲ್ಲ. ಇವರನ್ನು ಇಲ್ಲಿಗೆ ಕಳುಹಿಸಿ ಕೈಗೆ ರಕ್ತ ಅಂಟದಂತೆ ಕೊಲೆಗಳನ್ನು ಮಾಡಿಸಿದ್ದಾರಲ್ಲವಾ... ಆ ರಣಹದ್ದುಗಳು. ಅವರು ಬೇರೆಯೇ ಇದ್ದಾರೆ. ಅದನ್ನು ಗಮನಿಸು...'' ಆಕೆಯ ಗಂಟಲಲ್ಲಿ ಸ್ವಲ್ಪ ತೀವ್ರತೆ. ಕಣ್ಣು ಒರೆಸಿಕೊಂಡಳು. ಗಾಳಿಗೆ ಹಾರಾಡುತ್ತಿದ್ದ ಕೂದಲನ್ನು ಬಿಗಿಯಾಗಿ ಗಂಟುಕಟ್ಟಿಕೊಂಡಳು.

ಚಂದ್ರು ಸಾವಿತ್ರಿಯನ್ನು ಜೋರಾಗಿ ಕೂಗುತ್ತಲೇ ಇದ್ದಾನೆ. ಸಾವಿತ್ರಿ ಬೆಟ್ಟದಷ್ಟು ದುಃಖದಿಂದ ಆಕೆಯಲ್ಲಿ ತನ್ನನ್ನು ನೋಡಿಕೊಳ್ಳುತ್ತಿದ್ದಾಳೆ.

ಒಮ್ಮೆಗೇ ಆಕೆ ಗಂಭೀರವಾದಳು. ಶೂನ್ಯದತ್ತ ನೋಡುತ್ತ ಯಾವುದೇ ವೇದನೆ ಇಲ್ಲದೆ, ''ನಾನು ಸೋಲಲಿಲ್ಲ. ನನ್ನ ಮಕ್ಕಳು ಈ ಮರಳುಗಾಡು ರಾಜ್ಯದಲ್ಲಿ ನೇಣೆಗೇರುವುದಕ್ಕಿಂತಲೂ ಅಲ್ಲಿ ಹೋಗಿ ಪ್ರಜೆಗಳಿಗೋಸ್ಕರ ಸಾಯುವುದು ಉತ್ತಮ ಎಂದುಕೊಂಡೆ. ಎರಡು ಹುಲಿಗಳಿಗೋಸ್ಕರ ಒಂದು ಹುಲಿಯನ್ನು ಸಾಯಿಸೋಣವೆಂದುಕೊಂಡೆ. ಅದಕ್ಕೇನಮ್ಮಾ... ಇವರ ತಂದೆಯನ್ನು ಹಣಕ್ಕೋಸ್ಕರ ಮಿಲಿಟರಿಗೆ ನಾನೇ ಹಿಡಿದುಕೊಟ್ಟೆ. ಅದೇ ಈ ಹಣ...'' ಆಕೆ ಒಮ್ಮೆಗೇ ಮೌನವಾದಳು.